Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President




**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 | Issue - 7 | 15th August 2024

## ಸ್ವಾತಂತ್ರ್ಯ ದಿನಾಚರಣೆ

ಸಮಯ : ಬೆಳಿಗ್ಗೆ ಗಂಟೆ 8.00

ಸ್ಥಳ : ರೋಟರಿ ಶತಾಬ್ಧಿ ವೇದಿಕೆ, ಗಾಂಧೀ ಪಾರ್ಕ್, ಕುಂದಾಪುರ

## ರಸ್ತೆ ಸುರಕ್ಷತಾ ಜಾಗೃತಿ ಜಾಥಾ

ಎನ್. ಎಸ್. ಎಸ್. ವಿದ್ಯಾರ್ಥಿಗಳೊಂದಿಗೆ

ಸಮಯ : ಬೆಳಿಗ್ಗೆ ಗಂಟೆ 8.30 ಸ್ಥಳ : ಬೋರ್ಡ್ ಹೈಸ್ಕೂಲಿನಿಂದ

## ವಾರದ ಸಭೆ : ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಶಿಬಿರ

ಸಮಯ : ಬೆಳಿಗ್ಗೆ ಗಂಟೆ 9.30 ಸ್ಥಳ : ರೋಟರಿ ಲಕ್ಷ್ಮೀ ನರಸಿಂಹ ಕಲಾ ಮಂದಿರ, ಬೋರ್ಡ್ ಹೈಸ್ಕೂಲ್, ಕುಂದಾಪುರ

**39th year of Service and Fellowship**

## ವಾರದ ಸಭೆಯ ವರದಿ




ಆಗಸ್ಟ್ ತಿಂಗಳು ರೋಟರಿಯಲ್ಲಿ Membership Development ತಿಂಗಳು ಆಗಿರುವುದರಿಂದ ನಮ್ಮ ಸಭೆಗೆ ಮುಖ್ಯ ಅತಿಥಿಯಾಗಿ ಆಗಮಿಸಿದ Dist. Membership Development Committee ಯ Chairman ಆಗಿರುವ ರೊ. ಅಶೋಕ್ ಕುಮಾರ್ ಶೆಟ್ಟಿಯುವರನ್ನು ಮತ್ತು Zone Membership Co-ordinator ಆಗಿರುವ ರೊ. ಜೆ. ಶ್ರೀನಾಥ್ ರಾವ್‌ರವರನ್ನು ಹಾಗೂ ಎಲ್ಲಾ ರೋಟರಿ ಸದಸ್ಯರನ್ನು ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಹಾರ್ದಿಕವಾಗಿ ಸ್ವಾಗತಿಸಿದರು. ರೊ. ಶ್ರೀನಿವಾಸ್ ಶೇಟ್‌ರವರ ಪ್ರಾರ್ಥನೆಯ ನಂತರ ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ಕಳೆದ ವಾರದ ವರದಿಯನ್ನು ಸಭೆಗೆ ನೀಡಿದರು. ರೊ. ನಂದಾ ನಾಯಕ್‌ರವರು ವಾರದ ಚಿಂತನೆಯನ್ನು ನೀಡಿದ ಮೇಲೆ ರೋಟರಿ ಮಾಹಿತಿ ನೀಡಿದ ರೊ. ಶ್ರೀಧರ್ ಶೆಟ್ಟಿಯವರು "ಇಂದು ರೋಟರಿಗೆ ಯುವಕರನ್ನು ಆಕರ್ಷಿಸಬೇಕಾದರೆ ಪ್ರಥಮವಾಗಿ ಮನೆಯಲ್ಲಿ ಹೆತ್ತವರು ಹಾಗೂ ಶಾಲೆಯಲ್ಲಿ ಅಧ್ಯಾಪಕರು ಮಕ್ಕಳಿಗೆ 'ಮೊಬೈಲ್'ನ ಮಿತಿಗಳ ಬಗ್ಗೆ ವಿವರಿಸಿ ಆ ಗೀಳಿನಿಂದ ಹೊರತಂದು ಸಾಮಾಜಿಕ ಅಭಿವೃದ್ಧಿಯ ಜವಾಬ್ದಾರಿಗಳ ಬಗ್ಗೆ ತಿಳಿ ಹೇಳಿದ್ದಲ್ಲಿ ಯುವಕರು ರೋಟರಿಯ ಬಗ್ಗೆ ಆಕರ್ಷಿತರಾಗಬಹುದು" ಎಂದು ಆಶಿಸಿದರು. ಎಲ್ಲರಿಗೂ ಚಿರಪರಿಚಿತರಾಗಿರುವ ಮುಖ್ಯ ಅತಿಥಿಗಳನ್ನು ರೊ. ಕೆ.ಕೆ. ಕಾಂಚನ್‌ರವರು ಚುಟುಕಾಗಿ ಸಭೆಗೆ ಪರಿಚಯಿಸಿದರು. Membership Development ನ ಬಗ್ಗೆ ಮಾತನಾಡಿದ ಮುಖ್ಯ ಅತಿಥಿ ರೊ. ಅಶೋಕ್ ಕುಮಾರ್ ಶೆಟ್ಟಿಯವರು "ಹಲವಾರು ವರ್ಷಗಳಿಂದ ರೋಟರಿಯ ಸದಸ್ಯತ್ವದ ಸಂಖ್ಯೆಯು ಇಂದು ಹೆಚ್ಚು ಕಡಿಮೆ 'ತಟಸ್ಥ'ದ ಸ್ಥಾನದಲ್ಲಿದ್ದು ಅದನ್ನು ಏರುಗತಿಯಲ್ಲಿ ಏರಿಸಬೇಕಾದರೆ ಉತ್ಸಾಹಿ ಯುವಕರನ್ನು ರೋಟರಿಗೆ ಸೇರಿಸಿ, ಅವರನ್ನು ಮನೆಮಂದಿಯಂತೆ ಗುರುತಿಸಿಕೊಂಡಾಗ ಮಾತ್ರ ಅವರಿಗೂ ರೋಟರಿ ತಮ್ಮ ಕುಟುಂಬವೆನಿಸಿ ಆಪ್ತತೆ ಬಂದು ಅವರು ರೋಟರಿಯ ಶಾಶ್ವತ ಸದಸ್ಯರಾಗುತ್ತಾರೆ. ನಾವು ಪೋಲಿಯೋ ನಿವಾರಣೆಯಂತಹ ಹಲವಾರು ಕ್ರಾಂತಿಕಾರಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದರೂ, ಬಹಳ ಕಾಲ ಗತಕಾಲದ ವೈಭವವನ್ನೇ ಗುನುಗುನುಸುತ್ತಿರುವುದು ಸರಿಯಲ್ಲ. ಹೊಸ ಯುವಕರ ಸೇರ್ಪಡೆಯಿಂದ ಹೊಸ ವಿಚಾರಧಾರೆಗಳು ಹಾಗೂ ಇಂದಿನ ಅಗತ್ಯತೆಗಳು ಹೊಸದಾಗಿ ನಮಗೆ ಪರಿಚಯಗೊಳ್ಳುವ ಸಾಧ್ಯತೆಗಳು ಇರುವುದರಿಂದ ಎಲ್ಲಾ ಕ್ಲಬ್‌ಗಳು ತಮ್ಮ ಸದಸ್ಯತ್ವವನ್ನು ಕನಿಷ್ಠ ಶೇಕಡಾ 10 ರಷ್ಟು ಏರಿಕೆಯನ್ನು ಸಾಧ್ಯವಾಗಿಸಲು ಪ್ರಯತ್ನಿಸಬೇಕು". ಎಂದು ಕರೆ ನೀಡಿದರು. Zone Membership Co-ordinator ಆಗಿರುವ ರೊ. ಜೆ ಶ್ರೀನಾಥ್ ರಾವ್‌ರವರು ಮಾತನಾಡಿ "ರೋಟರಾಕ್ಟ್ ಕ್ಲಬ್‌ಗಳ ಸಂಖ್ಯೆ ಹೆಚ್ಚಾದರೆ ರೋಟರಿಯ ಸದಸ್ಯತ್ವ ಹೆಚ್ಚುತ್ತದೆ ಅಲ್ಲದೆ, ಎಲ್ಲಾ ಹೊಸ ಸದಸ್ಯರು Zone ಹಾಗೂ Dist. ಕಾರ್ಯಕ್ರಮಗಳಲ್ಲಿ ತಪ್ಪದೇ ಭಾಗಿಯಾದರೆ ರೋಟರಿಯ ಜ್ಞಾನ ಹಾಗೂ ಇತರ ಕ್ಲಬ್‌ಗಳ ಸದಸ್ಯರ ಪರಿಚಯವೂ ಆಗಿ ವ್ಯವಹಾರದಲ್ಲಿಯೂ ಬೆಳೆಯಲು ಸಾಧ್ಯ"ವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಅಧ್ಯಕ್ಷರು ತಮ್ಮ ಅನಿಸಿಕೆಯಲ್ಲಿ "ನಮ್ಮ ಕ್ಲಬ್ಬಿನ ಸದಸ್ಯತ್ವವನ್ನು ಏರಿಸುವ ಬಗ್ಗೆ ಭರವಸೆಯನ್ನು ನೀಡಿ, ಕಳೆದ ವಾರ ಗ್ರಾಮೀಣ ವಲಯದ ಪುಟ್ಟ ಮಕ್ಕಳಿಗೆ ನೀಡಿದ ಪ್ರೋಟಿನ್ ಪೌಡರ್ ನಮಗೂ ನೀಡಬಹುದೇ ಎಂದು ಬೇರೆಡೆಗಳಿಂದಲೂ ಬೇಡಿಕೆ ಬರುವಾಗ ರೋಟರಿಯ ಬಗ್ಗೆ ಧನ್ಯತೆಯ ಭಾವ ಬರುತ್ತದೆ" ಎಂದರು. ರೊ. ಮಹೆಂದರ್ ಶೆಟ್ಟಿಯವರು "ಇಂದು ಎಲ್ಲರನ್ನೂ, ಅದರಲ್ಲೂ ಹಿರಿಯರನ್ನು ಕಾಡುತ್ತಿರುವ ಮಧುಮೇಹದ ಬಗ್ಗೆ ತಮ್ಮ ಕುಟುಂಬದಲ್ಲಿ ಆದ ಘಟನೆಗಳನ್ನು ಸವಿಸ್ತಾರವಾಗಿ ವಿವರಿಸಿ ಮಧುಮೇಹದ ಬಗ್ಗೆ ಎಲ್ಲಾ ಹಿರಿಯರು ಜಾಗ್ರತರಾಗಿರಬೇಕು" ಎಂದು ಜಾಗ್ರತಿಯನ್ನು ಮೂಡಿಸಿದರು. ಲಕ್ಕಿ ರೋಟೇರಿಯನ್ ಆಗಿ ಆಯ್ಕೆಯಾದ ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ಎಲ್ಲರಿಗೂ ಧನ್ಯವಾದವನ್ನಿತ್ತರು. ರಾಷ್ಟ್ರಗೀತೆಯೊಂದಿಗೆ ಸಭೆಯು ಸಮಾಪ್ತಿಗೊಂಡಿತು.




ದಿನಾಂಕ 07–08–2024ರಂದು ಕುಂದಾಪುರದ ಓಕ್ ವುಡ್ ಇಂಡಿಯನ್ ಶಾಲೆಯ ಇಂಟರಾಕ್ಟ್ ಕ್ಲಬ್‌ನ ಪದಪ್ರದಾನ ಸಮಾರಂಭವನ್ನು ಶಾಲೆಯ ಸಭಾಂಗಣದಲ್ಲಿ ನೆರವೇರಿಸಲಾಯಿತು. ಇಂಟರ್‍ಯಾಕ್ಟ್ ಕ್ಲಬ್‌ನ ಅಧ್ಯಕ್ಷರಾಗಿ ಸಾತ್ವಿ ಶೆಟ್ಟಿ ಹಾಗೂ ಕಾರ್ಯದರ್ಶಿಯಾಗಿ ಸಮರ್ಥ್ ಅಯ್ಕೆಯಾದರು.

## ROTARY INFORMATION

The Rotary Foundation chair Barry Rassin announced at the Singapore Convention that TRF had awarded 1,098 global grants during the 2022-23 Rotary year.

"Just think about the scale of that work and the magnitude of our impact. Our work goes beyond global grants and supports every area of focus", he said.



ದಿನಾಂಕ 07–08–2024ರಂದು ಕುಂದಾಪುರದ ಓಕ್ ವುಡ್ ಇಂಡಿಯನ್ ಸ್ಕೂಲ್, ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಮತ್ತು ಇನ್ನರ್ ವೀಲ್ ಕ್ಲಬ್ ಕುಂದಾಪುರ ದಕ್ಷಿಣದ ಸಹಯೋಗದೊಂದಿಗೆ ಜಂಟಿಯಾಗಿ ವನಮಹೋತ್ಸವ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ರೋಟರಿ ಕ್ಲಬ್ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾ ಮತ್ತು ಇನ್ನರ್‌ವೀಲ್ ಅಧ್ಯಕ್ಷೆ ರೊ. ಸುರೇಖಾ ಪುರಾಣಿಕ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಉಭಯ ಕ್ಲಬ್ಬಿನ ಸದಸ್ಯರು ಪಾಲ್ಗೊಂಡಿದ್ದರು. ವನಮಹೋತ್ಸವಕ್ಕೆ ಗಿಡಗಳ ಪ್ರಾಯೋಜಕತ್ವವನ್ನು ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ವಹಿಸಿದ್ದರು.

## HEARTY CONGRATULATIONS!!!



Our member Rtn. PDG Abhinandan Shetty has been appointed by R.I. as Regional Public Image Co-ordinator (RPIC) for the entire Zone 7 consisting of 10 R. I. Dist. This is the First time any Past Governor from the undevided R.I. Dist. 3180 for being elevated to this coveted RI Position. Rotary Club Kundapura South and RI Dist. 3182 is proud of you and we sincerely wish many more higher positions may come on your way. Hearty Congratulations!!!

## ಹುಟ್ಟುಹಬ್ಬದ ಶುಭಾಶಯಗಳು



ರೊ. ಎಸ್. ಜಯಕರ ಶೆಟ್ಟಿ
ದಿನಾಂಕ : ಆಗಸ್ಟ್ 20
ಮೊಬೈಲ್ : 9448488232






ಕಳೆದ 26 ವರ್ಷಗಳಿಂದ ನಿರಂತರವಾಗಿ ತಮ್ಮ ಹುಟ್ಟು ಹಬ್ಬವನ್ನು ತಮ್ಮ ಮನೆಯಲ್ಲಿ ರೋಟರಿ ಮಿತ್ರರೊಂದಿಗೆ ಹಾಗೂ ತಮ್ಮ ಸಹೋದ್ಯೋಗಿಗಳೊಂದಿಗೆ ಆಚರಿಸಿಕೊಂಡು ಬಂದಿರುವ ನಮ್ಮ ಹಿರಿಯ ಸದಸ್ಯ ರೊ. ಜಿ. ಸಂತೋಷ್ ಕುಮಾರ್ ಶೆಟ್ಟಿಯವರಿಗೆ ತಾ. 12ರಂದು ನಮ್ಮ ಹೆಚ್ಚಿನ ಸದಸ್ಯರು ಅವರ ಮನೆಗೆ ಭೇಟಿ ನೀಡಿ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಿದರು.

## ಎಲ್ಲಾ ಸದಸ್ಯರ ಅವಗಾಹನೆಗೆ

ಇದೇ ತಾರೀಕು 15ರಂದು ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ವರ್ಷಂಪ್ರತಿಯಂತೆ ನಮ್ಮ ಕ್ಲಬ್ಬಿನ ವತಿಯಿಂದ ಕುಂದಾಪುರ ಗಾಂಧೀ ಪಾರ್ಕಿನ "ರೋಟರಿ ಶತಾಬ್ದಿ ವೇದಿಕೆ"ಯಲ್ಲಿ ರಾಷ್ಟ್ರ ಧ್ವಜಾರೋಹಣಗೊಳಿಸುವ ಕಾರ್ಯಕ್ರಮ ನಡೆಯಲಿದೆ. ನಮ್ಮ ಎಲ್ಲಾ ಸದಸ್ಯರು ಬೆಳಿಗ್ಗೆ 8:00 ಗಂಟೆಗೆ ಪಾರ್ಕಿನಲ್ಲಿ ಹಾಜರಾಗಿ ರಾಷ್ಟ್ರ ಧ್ವಜ ಗೌರವಿಸಲು ಕೋರಲಾಗಿದೆ. ಅಲ್ಲದೆ ಗಂಟೆ 8:30ಕ್ಕೆ ಸರಿಯಾಗಿ ರೋಟರಿ ಲಕ್ಷ್ಮೀ ನರಸಿಂಹ ಕಲಾಮಂದಿರದಿಂದ ವಿದ್ಯಾರ್ಥಿಗಳ ಜೊತೆಯಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ 'ಜಾಗೃತಿ ಜಾಥಾ' ನಡೆಯಲಿದೆ ಹಾಗೂ ಗಂಟೆ 9:30ಕ್ಕೆ ಸರಿಯಾಗಿ ರೋಟರಿ ಲಕ್ಷ್ಮೀ ನರಸಿಂಹ ಕಲಾಮಂದಿರದಲ್ಲಿ ಈ **ವಾರದ ಸಾಪ್ತಾಹಿಕ ಸಭೆ** ನಡೆಯಲಿದೆ. ಎಲ್ಲಾ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಬೇಕಾಗಿ ಕೋರಲಾಗಿದೆ.




ರೊ. ಮನೋಹರ ಭಟ್‌ರವರು ವರ್ಷಂಪ್ರತಿಯಂತೆ ಈ ವರ್ಷ ಕೂಡ ತಾ. 3-8-24ರಂದು ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಕೋಣಿಯಲ್ಲಿರುವ ಮಾನಸ ಜ್ಯೋತಿ ವಿಕಲಚೇತನ ಮಕ್ಕಳ ಶಾಲೆಗೆ ರೂ. 20,000/- ದ ದೇಣಿಗೆಯನ್ನು ನಮ್ಮ ಕ್ಲಬ್ಬಿನ ವತಿಯಿಂದ ನೀಡಿ ತಮ್ಮ ಹೃದಯ ವೈಶಾಲ್ಯತೆಯನ್ನು ಮೆರೆದರು. ಅಧ್ಯಕ್ಷರೊಂದಿಗೆ ರೊ. ಕೆ.ಕೆ. ಕಾಂಚನ್ ಮತ್ತು ರೊ. ಸತ್ಯನಾರಾಯಣ ಪುರಾಣಿಕ್‌ರವರು ರೊ. ಮನೋಹರ ಭಟ್ಟರ ಕಾರ್ಯಕ್ಕೆ ಮೆಚ್ಚುಗೆಯನ್ನು ಸೂಚಿಸಿದರು.

## ಕಳೆದ ವಾರದ ಚಿಂತನೆ

Time, power, money & body
may not cooperate every time in life,
But
Good nature, Good understanding, spiritual path &
true spirit will always cooperate in life...

ನೀಡಿದವರು : ರೊ. ನಂದಾ ನಾಯಕ್



Rtn. Dr. S. N. Padiyar 1985-86 & 1986-87
Rtn. B. Arun Kumar Shetty 1987-88
Rtn. Dr. H. Rammohan 1988-89
Rtn. K. Shridhar Kamath 1989-90
Rtn. Dr. Anand Nayak 1990-91
Rtn. B. Ramachandra Prabhu 1991-92
Rtn. G. Santhosh Kumar Shetty 1992-93
Rtn. Dr. H. A. Vishweshwar 1993-94
Rtn. Dr. H. R. Hebbar 1994-95



Rtn. K. T. Surendranath 1995-96



Rtn. B. C. Somayaji 1997-98



Rtn. S. Subraya Halambi 1999-2000



Rtn. K. Seetharama Nackathaya 2001-02



Rtn. Dr. Umesh Puthran 2003-04



Rtn. A. Shantharam Pai 2005-06

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 15–08–2024ನೇ ಗುರುವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ರಾಮಪ್ರಸಾದ್ ಶೇಟ್ ಮತ್ತು ಆ್ಯನ್ ರಶ್ಮಿ ಶೇಟ್ ಇವರಿಗೆ ಕ್ಲಬ್ಬಿನ ಪರವಾಗಿ ಶುಭಾಶಯಗಳು.

ಮೊ. : 9845085699



ತಾ. 21–08–2024ನೇ ಬುಧವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಎನ್. ಶಾಂತಾರಾಮ ನಾಯಕ್ ಮತ್ತು ಆ್ಯನ್ ರೇಖಾ ನಾಯಕ್ ಇವರಿಗೆ ಕ್ಲಬ್ಬಿನ ಪರವಾಗಿ ಶುಭಾಶಯಗಳು.

ಮೊ. : 9448887977



ದಿನಾಂಕ 10–08–2024ರಂದು District Interact Assembly **"ಚಿಗುರು – 2024"** ರೋಟರಿ ಕ್ಲಬ್ ತೆಕ್ಕಟ್ಟೆ ಇದರ ಆಯೋಜಕತ್ವದಲ್ಲಿ ತೆಕ್ಕಟ್ಟೆಯಲ್ಲಿ ನಡೆಯಿತು. ನಮ್ಮ ಕ್ಲಬ್‌ನ ಸದಸ್ಯರು, ಓಕ್‌ವುಡ್ ಆಂಗ್ಲ ಮಾಧ್ಯಮ ಶಾಲೆ ಮತ್ತು ನಿವೇದಿತಾ ಹೈಸ್ಕೂಲ್‌ನ 35 ಇಂಟರ್ಯಾಕ್ಟ್ ವಿದ್ಯಾರ್ಥಿಗಳು ಅಧ್ಯಾಪಕರೊಂದಿಗೆ ಭಾಗವಹಿಸಿ, ಕಾರ್ಯಕ್ರಮದ ಪ್ರಯೋಜನ ಪಡೆದರು. District Interact Chairman ರೊ. ಕೆ.ಕೆ. ಕಾಂಚನ್‌ರವರು ಈ ಅಸೆಂಬ್ಲಿಯನ್ನು ಯಶಸ್ವಿಯಾಗಿ ನಡೆಸಿಕೊಟ್ಟರು

**"Nothing can harm you as much as your own thoughts unguarded."**
**- Buddha.**

## The 4 Way Test

*of the things we think, say or do*

1. **Is it the TRUTH?**
2. **Is it FAIR to all concerned?**
3. **Will it build GOODWILL and BETTER FRIENDSHIPS?**
4. **Will it be BENEFICIAL to all concerned?**

Email id – rotaryclub.kundapurasouth@gmail.com



Rtn. S. Sadananda Chatra 1996-97



Rtn. K. Suresh Kamath 1998-99



Rtn. S. Vijaya Shetty 2000-01




Rtn. U. S. Shenoy 2002-03



Rtn. Dr. B. V. Udupa 2004-05



Rtn. K. Shantharam Prabhu 2006-07



Rtn. T. Raghavendra Hatwar 2007-08
Rtn. K. Shankar 2008-09
Rtn. S. Jayakar Shetty 2009-10
Rtn. K. K. Kanchan 2010-11
Rtn. Abhinandan A. Shetty 2011-12
Rtn. Vivian Crasto 2012-13
Rtn. G. Shreedhar Shetty 2013-14
Rtn. K. P. Bhat 2014-15
Rtn. P. Vasudeva Karanth 2015-16



Rtn. Aoudine F. Rebello 2016-17
Rtn. J. Srinath Rao 2017-18
Rtn. Johnson D' Almeida 2018-19
Rtn.Devaraj 2019-20
Rtn. Dr. Uttam Kumar Shetty 2020-21
Rtn.Mahendr Shetty 2021-22
Rtn.Sathyanarayana Puranik 2022-23
Rtn.Suresh Mallya 2023-24

*This Bulletin is sponsored by :*
Rtn. Arun Kumar Shetty
Mob. : 9880295366